ಅನುಬಂಧ–2

ಕಾಲೇಜು	ಸರ್ಕಾರಿ	ಅನುದಾನಿತ	ಖಾಸಗಿ
ಬಿ.ಎಡ್	6	22	40
ಬಿ.ಪಿ.ಎಡ್	3	–	9
	(ವಿಶ್ವವಿದ್ಯಾಲಯ)		
ಡಿ.ಎಡ್ (ಟಿ.ಸಿ.ಹೆಚ್)	37	40	54

513(204) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಿಳಿ ಗೋಟು ಅಡಿಕೆಯ ಬೆಲೆಯು ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಿಳಿಗೋಟು ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಿಸಿ ಖರೀದಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಇ) ಇದ್ದಲ್ಲಿ ಯಾವ ದರದಲ್ಲಿ ಬೆಂಬಲ ಬೆಲೆ ನೀಡಲಾಗುವುದು? ದರ ನಿರ್ಣಯಕ್ಕೆ ಆಧಾರ ಯಾವುದು?

ಈ) ಅಡಿಕೆಯನ್ನು ಎಂದಿನಂತೆ ಎಲ್ಲಿಯವರೆಗೆ ಖರೀದಿಸಲಾಗುವುದು? ಈ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸೆಲ್ಲಿಸಲಾಗಿದೆಯೇ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) :

ಅ) ಬಂದಿದೆ

ಆ) ಈ ಸಂಬಂಧವಾಗಿ ದಿನಾಂಕ: 28.06.2004 ರಂದು ಮಾನ್ಯ ಕೃಷಿ ಸಚಿವರು ಅಧ್ಯಕ್ಷತೆಯಲ್ಲಿ ಅಡಿಕೆ ಬೆಳೆಗಾರರ ಮತ್ತು ಅಡಿಕೆ ವ್ಯಾಪಾರದಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳೊಂದಿಗೆ ಸಭೆ ಜರುಗಿದ್ದು, ಈ ಕುರಿತು ಪರಿಶೀಲಿಸಲಾಗುತ್ತಿದೆ.

ಇ) 2002–03ರ ವರ್ಷದಲ್ಲಿ ಭಾರತ ಸರ್ಕಾರವು ಚಾಲಿ ಅಡಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ. 6,000–00ಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗಧಿಪಡಿಸಿತ್ತು.

ಅಡಿಕೆ ಸಾಗುವಳಿ ವೆಚ್ಚವನ್ನು ಪರಿಗಣಿಸಿ ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಶಿಫಾರಸ್ಸಿನ ಅನ್ವಯ ಭಾರತ ಸರ್ಕಾರವು ಅಡಿಕೆಗೆ ಬೆಂಬಲ ಬೆಲೆಯನ್ನು ನಿರ್ದರಿಸುತ್ತದೆ.

ಈ) ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದ್ದು, ಖರೀದಿಯ ದಿನಾಂಕವನ್ನು ನಿಗಧಿಪಡಿಸಿರುವುದಿಲ್ಲ.

514(488) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳು ಯಾವವು; ಹಾಗೂ ಅವುಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಈ ವಿಶ್ವವಿದ್ಯಾಲಯಗಳಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಎಷ್ಟು;

ಇ) ಅವರುಗಳು ಎಷ್ಟೆಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ;

ಈ) ಅವರುಗಳನ್ನು ಖಾಯಂ ಮಾಡುವ ಬಗ್ಗೆ ವಿಶ್ವವಿದ್ಯಾಲಯಗಳು ಯಾವ ಕ್ರಮ ಜರುಗಿಸಿವೆ;

ಉ) ಅವರುಗಳನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 1) ಮೈಸೂರು ವಿಶ್ವವಿದ್ಯಾಲಯ – 1916
2) ಕರ್ನಾಟಕ ವಿಶ್ವವಿದ್ಯಾಲಯ – 1949
3) ಬೆಂಗಳೂರು ವಿಶ್ವವಿದ್ಯಾಲಯ – 1964
4) ಗುಲ್ಬರ್ಗಾ ವಿಶ್ವವಿದ್ಯಾಲಯ – 1980
5) ಮಂಗಳೂರು ವಿಶ್ವವಿದ್ಯಾಲಯ – 1980
6) ಕುವೆಂಪು ವಿಶ್ವವಿದ್ಯಾಲಯ – 1987
7) ಕನ್ನಡ ವಿಶ್ವವಿದ್ಯಾಲಯ – 1991
8) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ– 1996
9) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ – 1998
10) ಬಿಜಾಪುರ ಮಹಿಳಾ ವಿಶ್ವವಿದ್ಯಾಲಯ – 2003
11) ತುಮಕೂರು ವಿಶ್ವವಿದ್ಯಾಲಯ – 2004

ಆ) ಅಧ್ಯಾಪಕರು–122
ಅಧ್ಯಾಪಕೇತರರು–1020

ಇ) ಕೆಲವರು ಸುಮಾರು 3 ತಿಂಗಳುಗಳಿಂದ ಮತ್ತೆ ಕೆಲವರು 3 ವರ್ಷದಿಂದ 17 ವರ್ಷಗಳ ವರೆಗೆ ವಿವಿಧ ಅವಧಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಈ),ಉ) ಖಾಯಂ ಮಾಡುವ ಬಗ್ಗೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

515(493) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ವಿಶ್ವವಿದ್ಯಾಲಯಕ್ಕೆ ಎಷ್ಟೆಷ್ಟು ಬ್ಲಾಕ್ ಗ್ರಾಂಟ್ ನೀಡಲಾಗುತ್ತಿದೆ;

ಆ) ದೂರ ಶಿಕ್ಷಣ ಒದಗಿಸುತ್ತಿರುವ ರಾಜ್ಯದ ಏಕೈಕ ವಿಶ್ವವಿದ್ಯಾಲಯವಾದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಬ್ಲಾಕ್ ಗ್ರಾಂಟ್ ನೀಡುವ ಬಗ್ಗೆ ಸರ್ಕಾರದ ನಿಲುವೇನು;

ಇ) ಈ ವಿಶ್ವವಿದ್ಯಾಲಯಕ್ಕೆ ಎಷ್ಟು ಬ್ಲಾಕ್ ಗ್ರಾಂಟ್ ನೀಡಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ;

ಈ) ಈ ಬಗ್ಗೆ ಸಕಾರಾತ್ಮಕ ನಿಲುವು ತೆಗೆದುಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಯನ್ನು ತಿಳಿಸುವುದು?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) 2004–05ನೇ ಆರ್ಥಿಕ ಸಾಲಿನಲ್ಲಿ ಒದಗಿಸಿರುವ ಬ್ಲಾಕ್ ಅನುದಾನ. (ಲಕ್ಷ ರೂ.ಗಳಲ್ಲಿ)

1) ಮೈಸೂರು ವಿಶ್ವವಿದ್ಯಾಲಯ – 3372.15
2) ಕರ್ನಾಟಕ ವಿಶ್ವವಿದ್ಯಾಲಯ – 3379.19
3) ಬೆಂಗಳೂರು ವಿಶ್ವವಿದ್ಯಾಲಯ – 2856.00